# KARNATAK SCIENCE COLLEGE, DHARWAD

(Constituent Science College of Karnatak University, Dharwad)

**Accredited with B++ Grade with CGPA 2.89 by NAAC in the 4th Cycle (2024)**

## Department of Zoology

# Activity Report on an Extension Activity

**General Information:**

| | |
|---|---|
| Type of Activity | **Extension Activity** |
| Title of the Activity | **Special Lecture on Animals by Mr. Naveen Pyatimani in Kalakeri Music School, Dharwad** |
| Date/s | **21-12-2024** |
| Time | **10.30 am -2 pm** |
| Venue | **Kalakeri Music School, Dharwad** |
| Collaboration/Sponsor (if any) | **No** |

**Speaker/Guest/Presenter Details**

| | |
|---|---|
| Name | **Mr.Naveen Pyatimani** |
| Title/Position | **Taxidermist, Zoology Museum, Department of Zoology** |
| Organization | **Karnatak Science College Dharwad** |
| Title of Presentation | **Study of the Animal Kingdom** |

**Participants profile**

| | |
|---|---|
| Type of Participants | **Student/Faculty/Research Scholar** |
| No. of Participants | **75 Students** |

**Synopsis of the Activity (Description)**

| | |
|---|---|
| Highlights of the Activity | **1.Study of Animal Kingdom** |
| Key Takeaways | **1.Study of different types of animals and birds** |
| Summary of the Activity | **Students learned and gained knowledge about each and every animals and birds and their special characters** |
| Opinion by Students | **https://youtu.be/ch1MiL9Cq34?si=NmlNMBzm2DNEDPR7** |

| | |
|---|---|
| Follow-up plan, if any | **Students have been encouraged to contact Mr. Naveen Pyatimani for clarification of doubts, if any.** |

**Rapporteur**

| | |
|---|---|
| Name of the Rapporteur | **Mr. Naveen Pyatimani** |
| Email and Contact No | **naveenpyatimani9901@gmail.com**<br>**9901208045** |

**Annexures:**
**PTO**

Kalkeri Sangeet Vidyalaya
A school with a difference

www.ksv.org.in - info@ksv.org.in
Dharwad District, 580007, Karnataka, India
+91 9741840666
Reg No: 121/2003-04

ಗೆ,
ಶ್ರೀ ನವೀನ ಪ್ಯಾಟಿಮನಿ (ಟ್ಯಾಕ್ಸಿಡರ್ಮಿಸ್ಟ)
ಪ್ರಾಣಿಶಾಸ್ತ್ರ ವಸ್ತುಸಂಗ್ರಾಲಯ
ಪ್ರಾಣಿಶಾಸ್ತ್ರ ವಿಭಾಗ
ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಧಾರವಾಡ

ವಿಷಯ : ಅಭಿನಂಧನಾ ಪತ್ರ ಸಲ್ಲಿಸುವ ಕುರಿತು.

ಮಾನ್ಯರೇ,

ನಮ್ಮ ಶಾಲೆ ಕಲಕೇರಿ ಸಂಗೀತ ವಿದ್ಯಾಲಯದಲ್ಲಿ ಪ್ರತಿ 15 ದಿನಕೋಮ್ಮೆ **D&D (Discovery & Development)** ನಡೆಸುತ್ತೇವೆ. ಅದರಂತೆ ದಿನಾಂಕ : 21–12–2024 ಶನಿವಾರ ದಂದು ನಡೆದ D&D ಗೇ ನೀವು ಬಂದು ಪ್ರಾಣಿಪ್ರಪಂಚದ ಕುರಿತು ವಿಶೇಷ ಉಪನ್ಯಾಸವನ್ನು ನಮ್ಮ ಮಕ್ಕಳಿಗೆ ಕೊಟ್ಟಿರುತ್ತೀರಿ. ಇದರಿಂದ ಪ್ರಾಣಿ–ಪಕ್ಷಿ, ಕಿಟಗಳು, ಮಿನು ಇತ್ಯಾದಿ ಜೀವಿಗಳಬಗ್ಗೆ ಸಮಗ್ರ ಮಾಹಿತಿಯನ್ನು ಹಂಚಿಕೊಂಡಿದಕ್ಕಾಗಿ ತಮಗೆ ವಿಶೇಷ ಅಭಿನಂಧನೆ ಗಳನ್ನು ಸಲ್ಲಿಸುತ್ತೇವೆ.

ಅದೆ ರೀತಿ ನಮ್ಮ ಶಾಲೆಯ ಮಕ್ಕಳು ತಮ್ಮ, ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಅವುಗಳಲ್ಲಿ ಕೆಲವು ಈ ಕೆಳಗಿನಂತೆ ಇವೆ.

ಮಕ್ಕಳ ಅಭಿಪ್ರಾಯಗಳು

ಶಿವಾನಂದ್ ಹೆಗ್ಗೇರಿ : ಪ್ರಾಣಿಗಳ ವಿಶೇಷತೆಗಳನ್ನು ನಮಗೆ ಗೊತ್ತಿರದ ಹಲವಾರು ವಿಷಯದ ಬಗ್ಗೆ ಪ್ರಾಣಿಗಳಾದ ಒಂಟಿ, ಪಕ್ಷಿಗಳು, ಮೀನಗಳು ಈಗ ಅನೇಕ ಕುತೂಹಲಕಾರಿಯಾದ ಪ್ರಾಣಿಗಳ ಬಗ್ಗೆ ತಿಳಿಸಿದರು.

ಸ್ನೇಹಾ ತಿಗಡೊಳ್ಳಿ : ಪ್ಯಾಟಿಮನಿ ಸರ್ ಅವರು ಪ್ರಾಣಿ ಪ್ರಪಂಚದ ಬಗ್ಗೆ ವಿಶೇಷವಾದ ಸಂಗತಿಗಳನ್ನು ಹಂಚಿಕೊಂಡರು ಹಾವುಗಳ, ಪಕ್ಷಿಗಳ, ವಿದ್ಯುತ್ ಉತ್ಪಾದಿಸುವ ಮೀನುಗಳು, ಗಂಡು ಪ್ರಾಣಿಯ ಸಂತಾನೋತ್ಪತ್ತಿ ಮಾಡುವ ಪ್ರಾಣಿಯ, ಹೀಗೆ ಹಲವಾರು ಪ್ರಾಣಿಗಳ ಬಗ್ಗೆ ನಮಗೆ ತಿಳಿಸಿಕೊಟ್ಟರು

ಭಾರತಿ ತಡಕೋಡ್ : ಸರ್ ಅವರು ಚರ್ಮ ಪ್ರಸಾದನ ಕಲೆಯ ತಜ್ಞರು ಈ ಕಲೆಯ ಬಗ್ಗೆ ನಾವು ಕೇಳಿದ್ದು ಇದೆ ಮೊದಲು. ಸರ್ ಅವರು ಪ್ರಾಣಿಗಳ ಬಗ್ಗೆ ಬಹಳ ಜ್ಞಾನವನ್ನು ಹೊಂದಿದ್ದಾರೆ ಆ ಜ್ಞಾನವನ್ನು ನಮಗೆ ಬಹಳ ಕುತೂಹಲಕಾರವಾಗಿ ವಿವರಿಸಿದರು ಜಲ್ಲಿ ಮೀನು, ಸಗಡಿ ಮೀನು, ಒಂಟೆ, ಆನೆ, ನವಿಲು,

**Kalkeri Sangeet Vidyalaya**
A school with a difference

www.ksv.org.in - info@ksv.org.in
Dharwad District, 580007, Karnataka, India
+91 9741840666
Reg No: 121/2003-04

ಹಾರವಹಲ್ಲಿ ಮುಂತಾದ ಅನೇಕ ಪ್ರಾಣಿಗಳ ಬಗ್ಗೆ ಅವುಗಳ ವಿಶೇಷ ಸಂಗತಿ ವಿಷಯವನ್ನು ನಮಗೆ ತಿಳಿಸಿದರು.

ಈ ತರಹ ನಮ್ಮ ಶಾಲೆಯ ಮಕ್ಕಳು ನಿಮಗೆ ಮತ್ತು ನೀವು ಪ್ರಾಣಿಗಳ ಬಗ್ಗೆ ಹೊಂದಿರುವ ಜ್ಞಾನಕ್ಕೆ ಅಭಿನಂದನೆಗಳನ್ನು ತಿಳಿಸಿದರು. ಮಕ್ಕಳು ಮಾತ್ರವಲ್ಲದೇ ಶಿಕ್ಷಕರು, ಮತ್ತು ಸಿಬ್ಬಂದಿ ವರ್ಗದವರು ಕೂಡ ಅಭಿನಂದನೆ ಸಲ್ಲಿಸಿದರು. ತಾವು ಮತ್ತೊಮ್ಮೆ ಕೂಡ 2025–26ರಲ್ಲಿ ನಮ್ಮ ಶಾಲೆಗೆ ಬಂದು ಪ್ರಾಣಿ ಪ್ರಪಂಚದ ಬಗ್ಗೆ ತಿಳಿಸಿಕೊಡಬೇಕು ಎಂದು ಮಕ್ಕಳು ಹಾಗೂ ಸಿಬ್ಬಂದಿ ವರ್ಗದವರು ಕೇಳಿಕೊಳ್ಳುತ್ತೇವೆ.

ವಂದನೆಗಳೊಂದಿಗೆ

| | | |
|---|---|---|
| ಮುಖ್ಯ ವ್ಯವಸ್ಥಾಪಕರು | ಡಿ & ಡಿ ನಿರ್ವಾಹಕರು | ಮುಖ್ಯೋಪಾಧ್ಯಯರು |
| ಕಲಕೇರಿ ಸಂಗೀತ ವಿದ್ಯಾಲಯ | ಕಲಕೇರಿ ಸಂಗೀತ ವಿದ್ಯಾಲಯ | ಕಲಕೇರಿ ಸಂಗೀತ ವಿದ್ಯಾಲಯ |
| ಕಲಕೇರಿ | ಕಲಕೇರಿ | ಕಲಕೇರಿ |

ಪ್ರಧಾನ ಗುರುಗಳು
ಕಲಕೇರಿ ಸಂಗೀತ ವಿದ್ಯಾಲಯ
ಹಿರಿಯ ಪ್ರಾಥಮಿಕ ಶಾಲೆ
ಕಲಕೇರಿ, ತಾ:ಜಿ: ಧಾರವಾಡ-580

ದಿನಾಂಕ : 26.12.2024
ಸ್ಥಳ : ಧಾರವಾಡ

ಕಲಕೇರಿ ಸಂಗೀತ ವಿದ್ಯಾಲಯ

ಒಂದು ವಿಭಿನ್ನ ಶಾಲೆ...

www.ksv.org.in - info@ksv.org.in

ಕಲಕೇರಿ , ಧಾರವಾಡ, 580007, ಕರ್ನಾಟಕ, ಭಾರತ

0091 (0) 9741 840 666

ರಿ.ಸಂ : 121/2003-04

ಗೆ,

ಶ್ರೀ ನವೀನ ಪ್ಯಾಟಿಮನಿ (ಟ್ಯಾಕ್ಸಿಡರ್ಮಿಸ್ಟ)

ಪ್ರಾಣಿಶಾಸ್ತ್ರ ವಸ್ತುಸಂಗ್ರಾಲಯ

ಪ್ರಾಣಿಶಾಸ್ತ್ರ ವಿಭಾಗ

ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಧಾರವಾಡ

ವಿಷಯ : ನಮ್ಮಶಾಲೆಗೆ "ಪ್ರಾಣಿಪ್ರಪಂಚ" ದ ಕುರಿತು ವಿಶೇಷ ಉಪನ್ಯಾಸಕರಾಗಿ ಆಗಮಿಸುವ ಕುರಿತು.

ಮಾನ್ಯರೇ,

ನಮ್ಮ ಶಾಲೆ ಕಲಕೇರಿ ಸಂಗೀತ ವಿದ್ಯಾಲಯದಲ್ಲಿ ಪ್ರತಿ 15 ದಿನಕ್ಕೋಮ್ಮೆ ಶನಿವಾರ D&D (Discovery & Development) ನಡೆಸುತ್ತೇವೆ. ಆದ ಕಾರಣ ದಿನಾಂಕ : 21-12-2024 ಶನಿವಾರ ದಂದು ನಡೆಯುವ D&D ಗೇ ನೀವು ಪ್ರಾಣಿಪ್ರಪಂಚದ ಕುರಿತು ವಿಶೇಷ ಉಪನ್ಯಾಸಕರಾಗಿ ಆಗಮಿಸಿ ನಮ್ಮ ಮಕ್ಕಳಿಗೆ ಪ್ರಾಣಿಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ವಂದನೆಗಳೊಂದಿಗೆ

ದಿನಾಂಕ : 16.12.2024

ಸ್ಥಳ : ಧಾರವಾಡ

ತಮ್ಮ ವಿಶ್ವಾಸಿ

ಪ್ರಧಾನ ಗುರುಗಳು

ಕಲಕೇರಿ ಸಂಗೀತ ವಿದ್ಯಾಲಯ

ಹಿರಿಯ ಪ್ರಾಥಮಿಕ ಶಾಲೆ

ಕಲಕೇರಿ, ತಾ:ಜಿ: ಧಾರವಾಡ

ಪ್ರಜಾ ಘರ್ಜನೆ



# ಕೀಟಗಳ, ಪ್ರಾಣಿ–ಪಕ್ಷಿಗಳ, ಪ್ರಕೃತಿಯ ಸಹಾಯದಿಂದ ಮನುಷ್ಯ ಜೀವ

**ಪ್ರಜಾ ಘರ್ಜನೆ ಸುದ್ದಿ**



**ಧಾರವಾಡ:** ಕಲಕೇರಿ ಸಂಗೀತ ವಿದ್ಯಾಲಯದಲ್ಲಿ ನಡೆದ ಅನ್ವೇಷಣೆ ಮತ್ತು ಅಭಿವೃದ್ಧಿ (ಡಿಸ್ಕವರಿ ಮತ್ತು ಡೆವೆಲಪಮೆಂಟ್) ಕಾರ್ಯಕ್ರಮದಲ್ಲಿ "ಪ್ರಾಣಿಪ್ರಪಂಚದ"ಕುರಿತು ಕಲಕೇರಿ ಸಂಗೀತ ವಿದ್ಯಾಲಯದ ಮಕ್ಕಳಿಗೆ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಪ್ರಾಣಿಶಾಸ್ತ್ರ ವಿಭಾಗದ ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯದ ಟ್ಯಾಕ್ಸಿಡರ್ಮಿಸ್ಟರಾದ ನವೀನ ಪ್ಯಾಟಿಮನಿ ವಿಶೇಷ ಉಪನ್ಯಾಸವನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಸಂಗೀತ ವಿದ್ಯಾಲಯದ ಪ್ರಾಂಶುಪಾಲರಾದ ರೂಪಾಲಿ ಅವಗೇರಿಮಠ ಮತ್ತು ಶಿಕ್ಷಕರಾದ ಕಾಂತೇಶ, ಸುನೀಲ, ನಾಗರಾಜ, ವಾಲಿಕಾರ ಸರ್ ಮತ್ತು 75 ವಿದ್ಯಾರ್ಥಿಗಳು ಹಾಜರಿದ್ದರು.

ನವೀನ ಪ್ಯಾಟಿಮನಿಯವರು ಪ್ರಾಣಿ ಪ್ರಪಂಚದ ಬಗ್ಗೆ ತಿಳಿಸುತ್ತಾ, ಕಡಿದರೆ 3 ರಿಂದ 5 ನಿಮಿಷದಲ್ಲಿ ಸಾವು ಸಂಭವಿಸುವಂತಹ ವಿಷಕಾರಿ ಬಾಕ್ಸ ಅಂಬಲೀ ಮೀನು, ಸೀಗಡಿಗಳನ್ನು ತಿನ್ನುವುದರಿಂದ ಹೃದಯಕ್ಕೆ ಮತ್ತು ಮೆದುಳಿಗೆ ಉಪಯೋಗಗಳು, ಗರಗಸ ಮೀನು ಮತ್ತು ಅರ್ಧ ಕೊಕ್ಕಿನ ಮೀನು ಆರೋಗ್ಯದ ದೃಷ್ಟಿಯಿಂದ ಉತ್ತಮವಾಗಿವೆ. ವಿಷಕಾರಿಯಾಗಿರುವ ಪಫರ್ ಮೀನು ಶತ್ರುವಿನಿಂದ ತಪ್ಪಿಸಿಕೊಳ್ಳಲು ಚೆಂಡಿನಂತೆ ಬದಲಾಗುತ್ತದೆ. ಅಲ್ಲದೇ ಸಾವೇ ಇಲ್ಲದ ಅಂಬಲಿ ಮೀನುಗಳಂತಹ ಸಮುದ್ರ ಜೀವಿಗಳ ಬಗ್ಗೆ ತಿಳಿಸಿದರು.

ಹೆಲಿಕ್ಯಾಪ್ಟರ್ ನಂತೆ ಹಾರುವ ಕಪ್ಪು ಬಿಳಿ ಮಿಂಚುಳ್ಳಿ, 32 ಮೆದುಳು ಹಾಗೂ 10 ಹೊಟ್ಟೆಯನ್ನು ಹೊಂದಿರುವ ಜಿಗಣಿ ಇದರಲ್ಲಿ ಗಂಡು ಮತ್ತು ಹೆಣ್ಣಿನ ಸಂತಾನೋತ್ಪತ್ತಿ ಅಂಗಗಳು ಒಂದೇಯಾಗಿರುತ್ತದೆ. ಮಾನವನಲ್ಲಿ ಹುಟ್ಟಿನಿಂದ 300 ಎಲುಬುಗಳಿದ್ದರೆ, ಬೆಳೆದಂತೆ 206 ಕ್ಕೆ ಇಳಿಯುತ್ತವೆ. ಪುರುಷನ ಮೆದುಳು 1400 ಗ್ರಾಂ ಇದ್ದರೆ, ಹೆಣ್ಣಿನ ಮೆದುಳು 1260 ಗ್ರಾಂ ಇರುತ್ತದೆ. ಆನೆಗಳು ಕಾಲಿನಿಂದ ಸಂವಹನ ಕ್ರಿಯೆಯನ್ನು ನಡೆಸುತ್ತವೆ. ಒಂಟೆಗಳು ನೀರನ್ನು ಸಂಗ್ರಹಿಸುವುದಿಲ್ಲ, ಗಂಡು ನವಿಲಿಗೆ ಮಾತ್ರ ಆಕರ್ಷಕ ಪುಕ್ಕಗಳಿದ್ದು ಹೆಣ್ಣು ನವಿಲಿಗೆ ಇರುವುದಿಲ್ಲ ಎಂಬುದನ್ನು ತಿಳಿಸಿದರು.

ಕೀಟಗಳು ಒಂದು ಗಿಡದಿಂದ ಮತ್ತೊಂದು ಗಿಡಕ್ಕೆ ಪರಾಗಸ್ಪರ್ಶ ಮಾಡುವುದರಿಂದಲೇ ನಮಗೆ ಹೂವು, ಕಾಯಿ, ಹಣ್ಣುಗಳಂತಹ ಆಹಾರ ಸಿಗುತ್ತಿರುವುದು.ಈ ಭೂಮಿಯ ಮೇಲೆ ಮನುಷ್ಯ ಜೀವಿಸುತ್ತಿರುವುದೇ ಕೀಟಗಳ, ಪ್ರಾಣಿ–ಪಕ್ಷಿಗಳ, ಪ್ರಕೃತಿಯ ಸಹಾಯದಿಂದ ಎಂದು ತಿಳಿಸುತ್ತಾ,ಹತ್ತು ಹಲವಾರು ವಿಸ್ಮಯಗಳಿಂದ ಕೂಡಿದ ಪ್ರಕೃತಿಯನ್ನು ಪ್ರಾಣಿ–ಪಕ್ಷಿಗಳನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು.

# ಮನುಷ್ಯ ಜೀವಿಸುತ್ತಿರುವುದೇ ಪ್ರಕೃತಿಯ ಸಹಾಯದಿಂದ: ಪ್ಯಾಟಿಮನಿ



**ಸಮಗ್ರ ಕರ್ನಾಟಕ ಸುದ್ದಿ**

**ಧಾರವಾಡ:** ತಾಲೂಕಿನ ಕಲಕೇರಿ ಸಂಗೀತ ವಿದ್ಯಾಲಯದಲ್ಲಿ ನಡೆದ ಅನ್ವೇಷಣೆ ಮತ್ತು ಅಭಿವೃದ್ಧಿ (ಡಿಸ್ಕವರಿ ಮತ್ತು ಡೆವೆಲಪಮೆಂಟ್) ಕಾರ್ಯಕ್ರಮದಲ್ಲಿ "ಪ್ರಾಣಿಪ್ರಪಂಚದ" ಕುರಿತು ಕಲಕೇರಿ ಸಂಗೀತ ವಿದ್ಯಾಲಯದ ಮಕ್ಕಳಿಗೆ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಪ್ರಾಣಿಶಾಸ್ತ್ರ ವಿಭಾಗದ ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯದ ಟ್ಯಾಕ್ಸಿಡರ್ಮಿಸ್ಟರಾದ "ನವೀನ ಪ್ಯಾಟಿಮನಿ" ವಿಶೇಷ ಉಪನ್ಯಾಸವನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಸಂಗೀತ ವಿದ್ಯಾಲಯದ ಪ್ರಾಂಶುಪಾಲರಾದ ರೂಪಾಲಿ ಅವಗೇರಿಮಠ ಮತ್ತು ಶಿಕ್ಷಕರಾದ ಕಾಂತೇಶ, ಸುನೀಲ, ನಾಗರಾಜ, ವಾಲಿಕಾರ ಸರ್ ಮತ್ತು 75 ವಿದ್ಯಾರ್ಥಿಗಳು ಹಾಜರಿದ್ದರು.

ನವೀನ ಪ್ಯಾಟಿಮನಿಯವರು ಪ್ರಾಣಿಪ್ರಪಂಚದ ಬಗ್ಗೆ ತಿಳಿಸುತ್ತಾ, ಕಡಿದರೆ 3 ರಿಂದ 5 ನಿಮಿಷದಲ್ಲಿ ಸಾವು ಸಂಭವಿಸುವಂತಹ ವಿಷಕಾರಿ ಬಾಕ್ಸ ಅಂಬಲೀ ಮೀನು, ಸೀಗಡಿಗಳನ್ನು ತಿನ್ನುವುದರಿಂದ ಹೃದಯಕ್ಕೆ ಮತ್ತು ಮೆದುಳಿಗೆ ಉಪಯೋಗಗಳು, ಗರಗಸ ಮೀನು ಮತ್ತು ಅರ್ಧ ಕೊಕ್ಕಿನ ಮೀನು ಆರೋಗ್ಯದ ದೃಷ್ಟಿಯಿಂದ ಉತ್ತಮವಾಗಿವೆ. ವಿಷಕಾರಿಯಾಗಿರುವ ಪಫರ್ ಮೀನು ಶತ್ರುವಿನಿಂದ ತಪ್ಪಿಸಿಕೊಳ್ಳಲು ಚೆಂಡಿನಂತೆ ಬದಲಾಗುತ್ತದೆ. ಅಲ್ಲದೇ ಸಾವೇ ಇಲ್ಲದ ಅಂಬಲಿ ಮೀನುಗಳಂತಹ ಸಮುದ್ರ ಜೀವಿಗಳ ಬಗ್ಗೆ ತಿಳಿಸಿದರು.

ಹೆಲಿಕ್ಯಾಪ್ಟರ್ ನಂತೆ ಹಾರುವ ಕಪ್ಪು ಬಿಳಿ ಮಿಂಚುಳ್ಳಿ, 32 ಮೆದುಳು ಹಾಗೂ 10 ಹೊಟ್ಟೆಯನ್ನು ಹೊಂದಿರುವ ಜಿಗಣಿ ಇದರಲ್ಲಿ ಗಂಡು ಮತ್ತು ಹೆಣ್ಣಿನ ಸಂತಾನೋತ್ಪತ್ತಿ ಅಂಗಗಳು ಒಂದೇಯಾಗಿರುತ್ತದೆ. ಮಾನವನಲ್ಲಿ ಹುಟ್ಟಿನಿಂದ 300 ಎಲುಬುಗಳಿದ್ದರೆ, ಬೆಳೆದಂತೆ 206 ಕ್ಕೆ ಇಳಿಯುತ್ತವೆ. ಪುರುಷನ ಮೆದುಳು 1400 ಗ್ರಾಂ ಇದ್ದರೆ, ಹೆಣ್ಣಿನ ಮೆದುಳು 1260 ಗ್ರಾಂ ಇರುತ್ತದೆ. ಆನೆಗಳು ಕಾಲಿನಿಂದ ಸಂವಹನ ಕ್ರಿಯೆಯನ್ನು ನಡೆಸುತ್ತವೆ. ಒಂಟೆಗಳು ನೀರನ್ನು ಸಂಗ್ರಹಿಸುವುದಿಲ್ಲ, ಗಂಡು ನವಿಲಿಗೆ ಮಾತ್ರ ಆಕರ್ಷಕ ಪುಕ್ಕಗಳಿದ್ದು ಹೆಣ್ಣು ನವಿಲಿಗೆ ಇರುವುದಿಲ್ಲ ಎಂಬುದನ್ನು ತಿಳಿಸಿದರು.

ಗಿಡುಗಗಳು, ಕಪ್ಪೆಗಳು ಸಾಮಾನ್ಯವಾದರೆ ಗೋಲ್ಡನ್ ಡಾರ್ಟ ಕಪ್ಪೆ ವಿಷಕಾರಿ ಕಪ್ಪೆಯಾಗಿದೆ, ಜಾಲಪಾದಗಳಿಂದ ಕೂಡಿರುವ ಮಲಬಾಗಿನ ಹಾರುವ ಕಪ್ಪೆ ಇದು ಹೆಚ್ಚಾಗಿ ಶಿರಸಿ, ಸಿದ್ಧಾಪುರದಲ್ಲಿ ಕಾಣ ಸಿಗುತ್ತವೆ. ಮಲಬಾರ್ ಟ್ರೋಗನ್ ಪಶ್ಚಿಮ ಘಟ್ಟಗಳಲ್ಲಿ ಯಥೇಚ್ಛವಾಗಿ ಕಂಡು ಬರುತ್ತವೆ. ಇಂಪಾದ ದ್ವನಿಯನ್ನು ಹೊಂದಿರುವ ಕೋಗಿಲೆಯು ಪರಾವಲಂಬಿಯಾಗಿದ್ದು, ಕಾಗೆ ಗೂಡಲ್ಲಿ ಮೊಟ್ಟೆ ಇಡುತ್ತದೆ. ಕೆಂಬೂತ ಅಥವಾ ರತ್ನಪಕ್ಷಿ, ಬಾವಲಿ, ದರ್ಜಿ ಹಕ್ಕಿ, ಸೂರಕ್ಕಿಗಳ ವಿಶೇಷತೆಗಳನ್ನು ತಿಳಿಸಿದರು. ಸಿವಿಲ್ ಇಂಜಿನಿಯರ್ ಎಂದೇ ಪ್ರಸಿದ್ಧವಾದ ಗೀಜುಗನ ಗೂಡು ಅದ್ಭುತ. ಇದನ್ನು ಅರ್ಧ ಗಂಡು ಗೀಜುಗ ಉಳಿದ ಅರ್ಧ ಹೆಣ್ಣು ಗೀಜುಗ ಕಟ್ಟಿ ಮುಗಿಸುತ್ತವೆ. ಹಾರುವ ಅಳಿಲುಗಳನ್ನು ಶಿವಮೊಗ್ಗ ಹಾಗೂ ಕೊಡಗಿನಲ್ಲಿ ನೋಡಬಹುದು. ನೀರು ನಾಯಿಯನ್ನು ಹೊಸಪೇಟೆಯಲ್ಲಿ ಸಂರಕ್ಷಿಸಲಾಗುತ್ತಿದೆ. ಪ್ರಪಂಚದಲ್ಲಿ 75% ವಿಷಕಾರಿ ಅಲ್ಲದ ಹಾವುಗಳಿದ್ದು, ಕೇವಲ 25% ಮಾತ್ರ ವಿಷಕಾರಿಯಾದ ಹಾವುಗಳಿವೆ. ಪ್ರಪಂಚದಲ್ಲೇ ತನ್ನ ಮರಿಗಳಿಗೆ ಗೂಡು ಕಟ್ಟು ಏಕೈಕ ಹಾವು ಕಾಳಿಂಗ ಸರ್ಪ ಇದರ ಜೀವಿತಾವಧಿ 20 ವರ್ಷ ಇದು 40 ಮೊಟ್ಟೆಗಳನ್ನು ಇಡುತ್ತದೆ, ಹಾವುಗಳು ಪ್ರಕೃತಿಯ ಆಹಾರ ಸರಪಳಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಹುಲಿಗಳು ಮಾಂಸವನ್ನು ಬಾಯಿಯಲ್ಲಿ ಹಿಡಿದು 6 ಕಿಲೋ ಮೀಟರ್ ಈಜಬಲ್ಲವು ಮತ್ತು ಅವುಗಳನ್ನು ಮೈ ಮೇಲಿನ ಪಟ್ಟೆಗಳಿಂದ ಅವುಗಳನ್ನು ಪ್ರತ್ಯೇಕವಾಗಿ ಗುರುತಿಸಬಹುದು.

ಮಣ್ಣು ನಮ್ಮ ನಿತ್ಯ ಜೀವನಕ್ಕೆ ಉಪಯೋಗವಾಗುವಂತಹ ಖನಿಜಗಳನ್ನು ಒಳಗೊಂಡಿದೆ. ಉದಾಹರಣೆಗೆ ನಮ್ಮ ದೇಹದ ಮುಳೆಗಳು ಗಟ್ಟಿಯಾಗಿ ಇರಬೇಕೆಂದರೆ ಚೆನ್ನಾಗಿ ಕಾರ್ಯನಿರ್ವಹಿಸಬೇಕೆಂದರೆ ನಮಗೆ "Calcium–ಕ್ಯಾಲ್ಸಿಯಂ" ಬೇಕು, ನಮ್ಮ ದೇಹದಲ್ಲಿ ರಕ್ತವು ಉತ್ಪಾದನೆಯಾಗಬೇಕಾದರೆ ಮತ್ತು ನಮ್ಮ ಹೃದಯ ಚೆನ್ನಾಗಿ ಕಾರ್ಯನಿರ್ವಹಿಸಬೇಕೆಂದರೆ ನಮಗೆ "Iron–ಕಬ್ಬಿಣ" ಬೇಕು, ದೇಹದ ಸ್ನಾಯುಗಳು ಚೆನ್ನಾಗಿ ಕಾರ್ಯನಿರ್ವಹಿಸಿಲು ಮತ್ತು ರಕ್ತದೊತ್ತಡವನ್ನು ನಿಯಂತ್ರಿಸಲು "Potassium–ಮೆದುಬಳ್ಳಿಕ" ಬೇಕು, ದೇಹದ ತೂಕ ಕಡಿಮೆ ಆಗಲು ಮತ್ತು ನೆನಪಿನ ಶಕ್ತಿ ಹೆಚ್ಚಿಸಲು ನಮಗೆ "Iodine–ಅಯೊಡಿನ್" ಬೇಕು. ರೋಗನಿರೋಧಕ ಶಕ್ತಿ ಹೆಚ್ಚಾಗ ಬೇಕಾದರೆ ಮತ್ತು ಬಿದ್ದು ಗಾಯಗಳಾದಾಗ ಗಾಯಗಳನ್ನು ಗುಣಪಡಿಸಬೇಕೆಂದರೆ ನಮಗೆ "Zinc–ಸತು" ಬೇಕು. ಇವೆಲ್ಲವೂ ಮಣ್ಣಿನಲ್ಲಿ ಇರುವುದರಿಂದ ನಾವು ಮಣ್ಣನ್ನು ಕಾಪಾಡಬೇಕು ಉಳಿಸಬೇಕು ಎಂದು ತಿಳಿಸಿದರು. ಗಿಡ–ಮರಗಳು ಬೇರುಗಳಿಂದ ವೈಜ್ಞಾನಿಕವಾಗಿ ಒಂದಕ್ಕೊಂದು ಮಾತನಾಡುತ್ತವೆ. ಇಡಿ ಜಗತ್ತಿನ ಜೀವಿಗಳ ದೇಹದಲ್ಲಿ ನಾವು ಒಟ್ಟು 6 ತರಹದ ರಕ್ತದ ಬಣ್ಣವನ್ನು ನೋಡಬಹುದು ಅವು ಯಾವುವು ಎಂದರೆ ಕೆಂಪು ರಕ್ತದ ಬಣ್ಣ ಇದರಲ್ಲಿ ಹಿಮೋಗ್ಲೋಬಿನ್ ಇರುತ್ತದೆ, ನೀಲಿ ರಕ್ತದ ಬಣ್ಣ ಇದರಲ್ಲಿ ಹಿಮೋಸಯಾನಿನ್ ಇರುತ್ತದೆ, ಹಸಿರು ರಕ್ತದ ಬಣ್ಣ ಇದರಲ್ಲಿ ಕ್ಲೋರೊಕ್ರೂರಿನ್ ಇರುತ್ತದೆ, ನೇರಳೆ ರಕ್ತದ ಬಣ್ಣ ಇದರಲ್ಲಿ ಹೆಮೆರಿಥ್ರೀನ್ ಇರುತ್ತದೆ, ಹಳದಿ ರಕ್ತದ ಬಣ್ಣ ಇದರಲ್ಲಿ ವನಾಬಿನ್ ಇರುತ್ತದೆ. ಬಣ್ಣರಹಿತ ರಕ್ತ ಇದರಲ್ಲಿ ಹಿಮೋಲಿಂಫ್ ಎಂಬ ವರ್ಣದ್ರವ್ಯವು ಇರುತ್ತದೆ ಎಂದು ತಿಳಿಸಿದರು.

ಕೀಟಗಳು ಒಂದು ಗಿಡದಿಂದ ಮತ್ತೊಂದು ಗಿಡಕ್ಕೆ ಪರಾಗಸ್ಪರ್ಶ ಮಾಡುವುದರಿಂದಲೇ ನಮಗೆ ಹೂವು, ಕಾಯಿ, ಹಣ್ಣುಗಳಂತಹ ಆಹಾರ ಸಿಗುತ್ತಿರುವುದು. ಈ ಭೂಮಿಯ ಮೇಲೆ ಮನುಷ್ಯ ಜೀವಿಸುತ್ತಿರುವುದೇ ಕೀಟಗಳ, ಪ್ರಾಣಿ–ಪಕ್ಷಿಗಳ, ಪ್ರಕೃತಿಯ ಸಹಾಯದಿಂದ ಎಂದು ತಿಳಿಸುತ್ತಾ, ಹತ್ತು ಹಲವಾರು ವಿಸ್ಮಯಗಳಿಂದ ಕೂಡಿದ ಪ್ರಕೃತಿಯನ್ನು ಪ್ರಾಣಿ–ಪಕ್ಷಿಗಳನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು.

**Extension Activity: Photographs on the Special Lecture on Animals by Mr. Naveen Pyatimani in Kalakeri Music School, Dharwad; Date: 21-12-2024**









